ಅಬ್ಬಣಬ್ಬೆ ತಾಯಿ; ಜಿನವಲ್ಲಭ ಪಂಪನ ಸಹೋದರ. ಪಂಪನ ತಂದೆ ವೈದಿಕ ಮತವನ್ನು ತ್ಯಜಿಸಿ ಜೈನಧರ್ಮವನ್ನು ಸ್ವೀಕರಿಸಿದನು. ಜೀವದಯೆಯುಳ್ಳದ್ದೇ ಶ್ರೇಷ್ಠ ಧರ್ಮವೆಂಬ ನಂಬಿಕೆಯೇ ಇದಕ್ಕೆ ಕಾರಣವಿರಬೇಕು. ಜೊತೆಗೆ, ಮತಾಂತರಗೊಂಡ ಬಳಿಕ ಸುತ್ತಲಿನವರ ನಿಂದೆಗೆ ಮನನೊಂದು ತೆಲುಗು ಪ್ರಾಂತವನ್ನು ಬಿಟ್ಟು ಕನ್ನಡ ನಾಡಿಗೆ ವಲಸೆ ಬಂದಿರಬೇಕು. ಹೀಗಾಗಿ, ಪಂಪನಿಗೆ ಬನವಾಸಿಯು ಹುಟ್ಟುನೆಲೆಯಂತೆ ಭಾಸವಾಗಿದೆ:

ಜಾತಿಯೊಳೆಲ್ಲಮುತ್ತಮದ ಜಾತಿಯ ವಿಪ್ರಕುಲಂಗೆ ನಂಬಲೇ<br>
ಮಾತೊ ಜಿನೇಂದ್ರಧರ್ಮಮೆ ವಲಂ ದೊರೆ ಧರ್ಮದೊಳೆಂದುನಂಬಿ<br>
ಜಾತಿಯನುತ್ತರೋತ್ತರಮೆ ಮಾಡಿ ನೆಗಟ್ಟಿದ ನಿಂತಿರಾತ್ಮವಿ<br>
ಖ್ಯಾತಿಯನಾತನಾತನ ಮಗಂ ನೆಗಟ್ದಿಂ ಕವಿತಾಗುಣಾರ್ಣವಂ

ಅನಂತರ ಪಂಪ ಚಾಳುಕ್ಯ ದೊರೆ ಅರಿಕೇಸರಿಯ ಆಸ್ಥಾನವನ್ನು ಸೇರಿದನು. ಅಲ್ಲಿ ನೆಲೆಗೊಂಡ ಮೇಲೆ ತನ್ನ ಅಪ್ರತಿಮ ಕವಿ ಪ್ರತಿಭೆಯನ್ನು ಪ್ರಕಟಿಸಿದನು. ವಿಕ್ರಮಾರ್ಜುನ ವಿಜಯವನ್ನು ಬರೆದು ಅರಿಕೇಸರಿಯಿಂದ ಧರ್ಮಪುರವೆಂಬ ಅಗ್ರಹಾರವನ್ನು ಪಡೆದನು. ಕವಿತಾಗುಣಾರ್ಣವ ಎಂಬ ಬಿರುದು ದಕ್ಕಿತು. ಪಂಪ ತನ್ನ ವೈಯಕ್ತಿಕ ಸಂಗತಿಗಳನ್ನು ನಿಸ್ಸಂಕೋಚವಾಗಿ ಹೇಳಿಕೊಂಡಿದ್ದಾನೆ. ಅವನು 'ದುಂದುಭಿಸಂವತ್ಸರೋದ್ಭವಂ' ಆದುದರಿಂದ, ಆದಿಪುರಾಣವನ್ನು ಬರೆದಾಗ ಅವನಿಗೆ ಮೂವತ್ತೊಂಬತ್ತು ವರ್ಷ. ಅಂದರೆ, ಕ್ರಿ.ಶ. 902ರಲ್ಲಿ ಆತ ಜನಿಸಿದ್ದು; ಆದಿಪುರಾಣ ರಚನೆಯಾದದ್ದು ಕ್ರಿ.ಶ. 941ರಲ್ಲಿ ಎನ್ನಲಾಗಿದೆ.

ಆದಿಪುರಾಣ ಪ್ರಥಮ ತೀರ್ಥಂಕರನಾದ ವೃಷಭನಾಥನ ಕಥೆ; ಆಗಮಿಕ ಕಾವ್ಯ. ಜಿನಸೇನ–ಗುಣಭದ್ರಾಚಾರ್ಯರ ಮಹಾಪುರಾಣವನ್ನು ಆಧರಿಸಿದ ಕೃತಿ. ಜೈನಧರ್ಮದ ತತ್ತ್ವಗಳನ್ನು ಸರಳಗೊಳಿಸದೆ, ಹೃದ್ಯ ಕಥಾನಕವನ್ನು ನಿರೂಪಿಸಿದ್ದಾನೆ. ಆದಿ ತೀರ್ಥಂಕರನ ಭವಾವಳಿಯ ದೃಶ್ಯಗಳು ಚಿತ್ರವತ್ತಾಗಿ ಮೂಡಿನಿಂತಿವೆ. ಲಲಿತಾಂಗ–ಸ್ವಯಂಪ್ರಭೆ, ವಜ್ರಜಂಘ–ಶ್ರೀಮತಿ ಪ್ರಸಂಗ ಹಾಗೂ ನೀಲಾಂಜನೆಯ ನೃತ್ಯ, ಭರತ–ಬಾಹುಬಲಿ ವ್ಯಾಯೋಗ ಸನ್ನಿವೇಶಗಳ ಮೂಲಕ ಭೋಗವಿರತಿ ಮತ್ತು ವೈರಾಗ್ಯದ ನೆಲೆಗಳನ್ನು ಸ್ಪಷ್ಟಪಡಿಸಿದ್ದಾನೆ.

ಆತನ ಮತ್ತೊಂದು ಗ್ರಂಥ ವಿಕ್ರಮಾರ್ಜುನ ವಿಜಯ ವ್ಯಾಸಭಾರತವನ್ನು ಆಧರಿಸಿ ರಚಿತವಾದದ್ದು. ಅಲ್ಲಿನ ವಿಸ್ತಾರವಾದ ಕಥೆಯನ್ನು ಸಂಕ್ಷೇಪವಾಗಿ ಹೇಳಿರುವ ಪಂಪ ಮುಖ್ಯ ಪ್ರಸಂಗಗಳನ್ನು ಬಿಟ್ಟಿಲ್ಲ. ಅರ್ಜುನನೊಂದಿಗೆ ಅರಿಕೇಸರಿಯನ್ನು ಸಮೀಕರಿಸಿ ಆತನನ್ನು ನಾಯಕನನ್ನಾಗಿ ರೂಪಿಸಿರುವ ಪಂಪ, ಭಾರತದ ಕಥೆಯೊಂದಿಗೆ ಪರೋಕ್ಷವಾಗಿ ತನ್ನ ಪ್ರಭುವಿನ ಚರಿತ್ರೆಯನ್ನು ಹೇಳಿದ್ದಾನೆ. ಅಲ್ಲಿ ತನ್ನ ಸ್ವಾಮಿನಿಷ್ಠೆಯನ್ನು, ಸ್ನೇಹಪರತೆಯನ್ನು ಪ್ರಕಟಿಸಿದ್ದಾನೆ. ಅರಿಕೇಸರಿಯ ಆಶ್ರಯದಲ್ಲಿದ್ದೂ ಸ್ವಾಭಿಮಾನಕ್ಕೆ ಚ್ಯುತಿಯನ್ನು ತಂದುಕೊಂಡವನಲ್ಲ: 'ಪೆರರೀವುದೇಂ ಪೆರರಮಾಡುವುದೇಂ ಪೆರರಿಂದಪ್ಪುದೇಂ' ಎಂದಿದ್ದಾನೆ. ಪ್ರಭುವಿನ ಬಾಯ್ದಂಬುಲಕ್ಕೆ ಕೈಚಾಚಿದವನಲ್ಲ. ಶಲ್ಯನಿಂದ ಹೀಗೆ ಹೇಳಿಸುತ್ತಾನೆ: 'ಓಲೈಸಿ ಬಾಳ್ವುದೇ ಕಷ್ಟಮಿಳಾಧಿನಾಥರಂ'. ಹೀಗಾಗಿ, ಪಂಪ ಸ್ವಾಭಿಮಾನ, ಸ್ವಸಾಮರ್ಥ್ಯ, ಪ್ರತಿಭೆ–ಪಾಂಡಿತ್ಯಗಳ ಸಂಗಮವೆನಿಸುತ್ತಾನೆ. ಸಂಸ್ಕೃತ–ಪ್ರಾಕೃತದಲ್ಲಿ ಆತನಿಗೆ ಪ್ರಭುತ್ವವಿದ್ದೂ, ಕನ್ನಡದ ದೇಸಿಯನ್ನು ಕಾವ್ಯಭಾಷೆಯನ್ನಾಗಿ ಮಾನ್ಯಮಾಡಿದ್ದಾನೆ. ಮಾರ್ಗ–ದೇಸಿ ಸಮನ್ವಯ ಆತನ ಕಾವ್ಯಗಳಲ್ಲಿ ಸಾಧಿತವಾಗಿದೆ.

ಆದಿಪುರಾಣ ಮೇಲುನೋಟಕ್ಕೆ ಭವಾವಳಿ/ಜನ್ಮಾಂತರದ ಕಥೆ ಎನಿಸಿದರೂ, ಕವಿ ಧರ್ಮವನ್ನು